

# ಹಿಮ ರಾಕ್ಷಸರು!

ಮಧ್ಯ ಜಪಾನ್‌ನ ಮೌಂಟ್ ಝೋವೊವಿನ ಇಳಿಜಾರುಗಳಲ್ಲಿ, ಸೈಬೀರಿಯಾದಿಂದ ಬೀಸುವ ತೇವಾಂಶ ಹೊತ್ತಿರುವ ತಂಪನೆಯ ಮಾರುತಗಳು ಬಡಿದು ನೈಸರ್ಗಿಕ ಅಚ್ಚರಿಯನ್ನೇ ಸೃಷ್ಟಿಸುತ್ತವೆ. ಅತ್ಯಂತ ಆಕರ್ಷಣೀಯವಾಗಿ ಕಾಣುವ ಈ ವಿಚಿತ್ರ ವಿದ್ಯಮಾನವನ್ನು ಕಣ್ತುಂಬಿಕೊಳ್ಳಲು ಜಪಾನಿಗರು ಚಳಿಗಾಲ ಬರುವುದನ್ನೇ ಕಾತರದಿಂದ ಕಾಯುತ್ತಿರುತ್ತರಂತೆ!

ನೀರಿನ ಚಿಕ್ಕ ಚಿಕ್ಕ ಹನಿಗಳಿಂದ ಕೂಡಿರುವ ಪ್ರಭಲ ಮಾರುತಗಳು ಮೌಂಟ್ ಝೋವಿನಲ್ಲಿರುವ ಪೈನ್ ಮರಗಳ ಹಾಗೂ ಅವುಗಳ ಕೊಂಬೆಗಳ ಮೇಲೆ ಹೆಪ್ಪುಗಟ್ಟಿ ಹಿಮ ಬಿಳಿಲುಗಳನ್ನೇ ರೂಪಿಸಿಬಿಡುತ್ತವೆ.ಬಲವಾದ ಮಾರುತಗಳಿಂದ ಈ ಹಿಮಬಿಳಿಲುಗಳು ಬಹುತೇಕ ಸಮತಲವಾಗಿ ಬೆಳೆಯುತ್ತವೆ. ಇದರ ಮೇಲೆ ಬೀಳುವ ಹಿಮವು ಎತ್ತರವಾದ ವಿಲಕ್ಷಣವಾದ 'ಬಿಳಿ ಮನುಷ್ಯ' ಚಿತ್ರಗಳನ್ನು ಸೃಷ್ಟಿಸುತ್ತದೆ.ಇವುಗಳನ್ನು ಜಪಾನಿಯರು 'ಜುಹ್ಯೊ' ಅಥವಾ ಹಿಮ ರಾಕ್ಷಸರು ಎಂದು ಕರೆಯುತ್ತಾರೆ.

ಹಿಮರಾಕ್ಷಸರು ರೂಪುಗೊಳ್ಳಲು ನಿತ್ಯಹರಿದ್ವರ್ಣ ಕೋನಿಫರ್ ಮರಗಳಲ್ಲಿ ಬಲವಾದ ಗಾಳಿ, ಕಡಿಮೆ ತಾಪಮಾನ ಮತ್ತು ಹಿಮಪಾತದ ನಿರ್ದಿಷ್ಟ ಸಂಯೋಜನೆ ಅಗತ್ಯವಾಗಿರುತ್ತದೆ. ಜುಹ್ಯೊ ರಚನೆಗಳು ಜಪಾನಿನ ಇತರೆ ಭಾಗಗಳಲ್ಲಿ ಕಂಡು ಬರುತ್ತವೆ ಆದರೆ ಹಿಮ ರಾಕ್ಷಸರ ಅಪೂರ್ವವಾದ ಅನುಭವ ಹೊಂದಲು ಮೌಂಟ್ ಝೋವೊ ಅತ್ಯಂತ ಸುಲಭದ ದಾರಿಯಾಗಿದೆ. ಅದೂ ಅಲ್ಲದೆ ಮೌಂಟ್ ಝೋವೊ ಸಹ ಬಿಸಿ ನೀರಿನ ಬುಗ್ಗೆಗಳ ಮತ್ತು ಸ್ಕೀಯಿಂಗ್ (ಹಿಮದಲ್ಲಿ ಜಾರುವ ಕ್ರೀಡೆ) ನ ಪ್ರವಾಸಿ ತಾಣವೂ ಆಗಿದೆ. ಇಲ್ಲಿ ರೋಪ್ ವೇ ಕೂಡ ಇರುವುದರಿಂದ ಪ್ರವಾಸಿಗರು ಜುಹ್ಯೊವನ್ನು ತುಂಬಾ ಚೆನ್ನಾಗಿ ವೀಕ್ಷಣೆ ಮಾಡಬಹುದು.

**■ ವಿದ್ಯಾ ವಿ. ಹಾಲಭಾವಿ**

